# ಸಿಂಪಲ್ ಕಥೆಗಳ ಸೆಳೆತದಲ್ಲಿ ಆಶ್ವಿತಾ

‘ಕಂಬ್ಳಿಹುಳ’ ಸಿನಿಮಾ ಖ್ಯಾತಿಯ ನಟಿ ಆಶ್ವಿತಾ ಹೆಗ್ಡೆ ಅವರಿಗೆ ನಮ್ಮ ಸುತ್ತಮುತ್ತಲ ಜೀವನವನ್ನು ಬಿಂಬಿಸುವ ಸರಳ ಕಥೆಗಳ ಸಿನಿಮಾಗಳಲ್ಲಿ ನಟಿಸುವ ಆಶಯ. ಅವರ ಅಭಿನಯದ ‘ಕಲರ್ಸ್’ ವೆಬ್ ಸೀರೀಸ್ ಈಚೆಗೆ ಬಿಡುಗಡೆಗೊಂಡಿದ್ದು, ಮೂರು ಫೀಚರ್ ಸಿನಿಮಾಗಳು ತೆರೆಕಾಣುವ ಸರತಿಯಲ್ಲಿವೆ. ತಮ್ಮ ಬಣ್ಣದ ಪ್ರಪಂಚದ ಆಗುಹೋಗುಗಳನ್ನು ಅವರು ‘ಸುಧಾ’ ಜೊತೆ ಹಂಚಿಕೊಂಡಿದ್ದಾರೆ.

■ ಸುಮಲತಾ ಎನ್‌.



◆ **‘ಕಂಬ್ಳಿಹುಳ’ ನಂತರ ನಿಮ್ಮ ಸಿನಿಮಾ ಹಾದಿ ಹೇಗೆ ಸಾಗಿದೆ?**

ನನ್ನ ಮೊದಲ ಸಿನಿಮಾ ‘ಕಂಬ್ಳಿಹುಳ’. ಅದಾದ ಮೇಲೆ ಮೂರು ಫೀಚರ್ ಸಿನಿಮಾಗಳಲ್ಲಿ ಹಾಗೂ ಎರಡು ಕಿರುಚಿತ್ರಗಳಲ್ಲಿ ನಟಿಸಿದ್ದೇನೆ. ‘ದೇವರ ಹೆಸರಲ್ಲಿ ಪ್ರಮಾಣ ಮಾಡುತ್ತೇನೆ’ ಸಿನಿಮಾದಲ್ಲಿ ಟೀಚರ್ ಪಾತ್ರ ಮಾಡಿದ್ದೇನೆ. ‘ಕೌರವ’ ಎಂಬ ಚಿತ್ರದಲ್ಲಿ ನಟಿಸಿದ್ದೇನೆ. ಮತ್ತೊಂದು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾದಲ್ಲಿ ಅಭಿನಯಿಸಿದ್ದೇನೆ. ಎಲ್ಲವೂ ಹೊಸ ತಂಡಗಳು.

ಸಿನಿಮಾಗಳೊಂದಿಗೆ, ‘ನೀನೊಂದು ಶಾಯರಿ’ ಎಂಬ ಕಿರುಚಿತ್ರದಲ್ಲಿ ಅಭಿನಯಿಸಿದ್ದೇನೆ. ಅದಕ್ಕೆ ಉತ್ತಮ ಸ್ಪಂದನ ದೊರಕಿತು. ಈಚೆಗೆ ನಿರ್ದೇಶಕ ರಿಷಭ್ ಶೆಟ್ಟಿ ಅವರ ಯೂಟ್ಯೂಬ್ ಚಾನಲ್‌ನಲ್ಲಿ ನಾನು ಅಭಿನಯಿಸಿರುವ ‘ಕಲರ್ಸ್’ ಎಂಬ ಮಿನಿ ವೆಬ್ ಸೀರೀಸ್ ಬಿಡುಗಡೆ ಆಗಿದೆ. ಕನ್ನಡದಲ್ಲಿ ಹೊಸದಾದ ಒಂದು ಫಾರ್ಮಾಟ್‌ನ ಈ ಸರಣಿಗೆ ಒಳ್ಳೆಯ ಪ್ರತಿಕ್ರಿಯೆಯೂ ಸಿಗುತ್ತಿದೆ. ಆರು ಎಪಿಸೋಡ್‌ಗಳ ಸರಣಿಯಲ್ಲಿ ಒಂದೊಂದು ಎಪಿಸೋಡ್ 10–11 ನಿಮಿಷದ ಅವಧಿಯದು. ‘ಕಲರ್ ಬ್ಲೈಂಡ್‌ನೆಸ್’ ಸುತ್ತ ಹೆಣೆದಿರುವ ಕಥೆ. ಸರಳ ಹಾಗೂ ಸುಂದರ ಪ್ರೇಮ ಕಥಾವಸ್ತುವಿನ ಸರಣಿ.

◆ **ಕನ್ನಡದಲ್ಲಿ ವೆಬ್ ಸೀರೀಸ್ ಹಾಗೂ ಕಿರುಚಿತ್ರ ಮಾಧ್ಯಮಕ್ಕೆ ಪ್ರತಿಕ್ರಿಯೆ ಹೇಗಿದೆ?**

ಈಗ ಆನ್‌ಲೈನ್ ಕಂಟೆಂಟ್ ಬಳಸುವವರು ಹೆಚ್ಚು. ಒಟಿಟಿಯಲ್ಲಿ ಸಿನಿಮಾ ನೋಡುವವರ ಸಂಖ್ಯೆಯೂ ಹೆಚ್ಚಿದೆ. ಹಿಂದಿ, ತಮಿಳು, ತೆಲುಗು ಕಂಟೆಂಟ್‌ಗಳು ಹೆಚ್ಚು ಸಿಗುತ್ತವೆ. ಕನ್ನಡದಲ್ಲಿ ವೆಬ್ ಸೀರೀಸ್‌ಗಳು ಕಡಿಮೆ. ಇಂಥದ್ದೊಂದು ಮಾಧ್ಯಮವನ್ನು ಬಳಸಿಕೊಂಡು ಕಥೆಗಳನ್ನು ತಲುಪಿಸುವ ಪ್ರಯತ್ನಗಳು ನಮ್ಮಲ್ಲಿ ಸಾಗುತ್ತಿವೆ.

‘ಕಂಬ್ಳಿಹುಳ’ ಸಿನಿಮಾ ಜನರಿಗೆ ನಿರೀಕ್ಷಿತ ಮಟ್ಟದಲ್ಲಿ ರೀಚ್ ಆಗದಿದ್ದರೂ ಒಳ್ಳೆಯ ಹೆಸರು ಕೊಟ್ಟಿತು. ಸಿನಿಮಾರಂಗದಲ್ಲಿ ಮಾತು ಹುಟ್ಟುಹಾಕಿತು. ಅದಾದ ಮೇಲೆ ಕಿರುಚಿತ್ರದಲ್ಲಿ ಅಭಿನಯಿಸುವಾಗ ಯಾಕೆ ಮತ್ತೆ ಕಿರುಚಿತ್ರ ಮಾಡಿದೆ ಎಂದು ಕೆಲವರು ಕೇಳಿದ್ದರು. ಆದರೆ ನನ್ನ ಅಭಿನಯದ ಎರಡು–ಮೂರು ಕಿರುಚಿತ್ರಗಳು ನನಗೆ ಬಹಳ ಒಳ್ಳೆಯ ಹೆಸರು ನೀಡಿವೆ. ‘ನೀನೊಂದು ಶಾಯರಿ’, ‘ಇಟ್‌ವಾಸ್ ನೈಸ್ ಮೀಟಿಂಗ್ ಯೂ’ ಕಿರುಚಿತ್ರಗಳನ್ನು ಸಿನಿಮಾದಂತೆಯೇ ರೂಪಿಸಲಾಗಿದೆ. ಈಗ ಕಿರುಚಿತ್ರಗಳನ್ನೂ ಸಿನಿಮಾ ಗುಣಮಟ್ಟದಲ್ಲೇ ರೂಪಿಸಲಾಗುತ್ತಿದೆ. ಕಲಾವಿದರಿಗೆ ‘ಮೀಡಿಯಂ’ ಅನ್ನುವುದು ಒಂದು ತಡೆ ಆಗಬಾರದು ಎಂದು ನನಗನ್ನಿಸುತ್ತದೆ. ಮಾಧ್ಯಮ ಯಾವುದಿದ್ದರೂ ಒಳ್ಳೆಯ ಕಥೆ ಆಯ್ಕೆ ಮಾಡಿದರೆ ಜನರನ್ನು ತಲುಪಬಹುದು. ಇದು ‘ಕಂಟೆಂಟ್ ಈಸ್ ಕಿಂಗ್’ ಎನ್ನುವ ಕಾಲ.

◆ **ಯಾವ ರೀತಿಯ ಕಥೆಗಳು ನಿಮ್ಮನ್ನು ಸೆಳೆಯುತ್ತವೆ?**

ಸರಳ ಕಥೆಗಳು ನನಗಿಷ್ಟ. ಮೊದಲಿನಿಂದ